ಅಧ್ಯಕ್ಷರು : ಇನ್ನೊಂದು ಸಣ್ಣ ಬಿಲ್ ಇದೆ, ಅದನ್ನು ಮಾಡಿ ಬಿಡೋಣ. ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2009:

7. ಶಾಸನ ರಚನೆ :

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ 2009

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, The Code of Criminal Procedure Bill 2009 ಅನ್ನು ಪರ್ಯಾಲೋಚನೆಗೆ ಮಂಡಿಸುತ್ತೇನೆ.

(ಪ್ರಸ್ತಾಪವನ್ನು ಮಂಡಿಸಲಾಯಿತು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈ Director of Prosecution ನ್ನು ನಾವು ಕರ್ನಾಟಕದಲ್ಲಿ 1973 ರಲ್ಲಿ ಪ್ರಾರಂಭಿಸಿರುತ್ತೇವೆ. ನಂತರ ಕೇಂದ್ರದಲ್ಲಿ Director of Prosecution ಪ್ರಾರಂಭಿಸಬೇಕು ಎಂದು ಅದು 2005 ರಲ್ಲಿ ಒಂದು ತಿದ್ದುಪಡಿಯಾಗಿ ಇಡೀ ದೇಶಕ್ಕೆ ಅನ್ವಯವಾಗುವಂತೆ ತಿಳಿಸಿತು. ಆದರೆ ಕರ್ನಾಟಕದಲ್ಲಿ ನಾವು ಇದಕ್ಕೊಂದು separate recruitment rules ಮಾಡಿಕೊಂಡು appointment ಮಾಡಿ promotion ಕೊಟ್ಟು ನಾವು ಬೇರೆ ಬೇರೆ ಹಂತಕ್ಕೆ ನೇಮಕಾತಿಗಳನ್ನು ಮಾಡುತ್ತೇವೆ. ಕೇಂದ್ರ ಸರ್ಕಾರ ಇದಕ್ಕೆ ಏನು ತಿದ್ದುಪಡಿಯನ್ನು ಸೂಚಿಸಿದೆ, ಅದಕ್ಕೆ 10 ವರ್ಷ ಸರ್ವಿಸ್ ಆದ Advocate ನ್ನು Director of Prosecution ಮತ್ತು Joint Director of Prosecution ನ್ನು ನೇಮಿಸಬೇಕು ಎನ್ನುವಂಥದ್ದನ್ನು ತಿದ್ದುಪಡಿ ತರಬೇಕಾಗಿದೆ. ನಮ್ಮಲ್ಲಿ ಏನಾಗಿದೆ ಎಂದರೆ, ಈ APP ಗಳನ್ನು ನಾವು Direct ಆಗಿ appointment ಮಾಡಿಕೊಳ್ಳುತ್ತೇವೆ. Direct ಆಗಿ appointment ಮಾಡಿಕೊಂಡ ನಂತರದಲ್ಲಿ ಅವರು Assistant Public Prosecutor ಎಂದು promotion ಆಗುತ್ತಾರೆ. ಆ

ನಂತರ Senior Assistant Public Prosecutor ಆಗಿ promotion ಆಗುತ್ತಾರೆ. ಹಾಗೆ Joint Director ಆಗಿ ಮತ್ತು Director of Prosecution ಆಗಿ Promotion ಆಗಿ Director of Prosecution ಆಗುವಂಥದ್ದು ರೂಡಿಯಲ್ಲಿದೆ. ಇದಕ್ಕೆ ಪ್ರತ್ಯೇಕವಾದಂಥ ರೂಲ್ಸ್‌ನ್ನು ನಾವು ಕರ್ನಾಟಕದಲ್ಲಿ ರಚಿಸಿಕೊಂಡು ಮಾಡಿಕೊಂಡಿರುತ್ತೇವೆ. ಹಾಗಾಗಿ ಈಗ ಕೇಂದ್ರದಲ್ಲಿ 2005 ರಲ್ಲಿ Director of Prosecution ನ್ನು ಜಾರಿಗೆ ತರಬೇಕೆಂದು ಹೇಳಿ 10 ವರ್ಷ Advocate ಆದವರನ್ನೇ Director of Prosecution ಮತ್ತು Joint Director of Prosecution ಆಗಿ ನೇಮಕ ಮಾಡಬೇಕೆಂದು ಹೇಳಿದೆಯೋ ಅದು ಕರ್ನಾಟಕಕ್ಕೆ ಅಗತ್ಯವಿಲ. ಹಾಗಾಗಿ ಅದಕ್ಕೆ ಒಂದು ತಿದ್ದುಪಡಿಯನ್ನು ಈ ಒಂದು ಬಿಲ್‌ಗೆ ತರುತ್ತಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : What is the basis for this.? ಅದನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಬೇರೆ ಇನ್ನಾವುದೇ ರೀತಿಯಲ್ಲಿ contradictory ಆಗುವುದಿಲ್ಲ. ಕರ್ನಾಟಕದಲ್ಲಿ ನಾವು 1972–73ರಲ್ಲಿಯೇ Director of Prosecution ನ್ನು ಸ್ಥಾಪಿಸಿಕೊಂಡು ಅದಕ್ಕೆ appointment procedure ಗಳೆಲ್ಲವನ್ನು ನಾವು ಮಾಡಿಕೊಂಡಿದ್ದೇವೆ. ನಾವು APP ಗಳನ್ನು appointment ಮಾಡಿಕೊಳ್ಳುತ್ತೇವೆ, ಅದರ ನಂತರ ನಾವು Promotion ಕೊಟ್ಟು ತರುತ್ತೇವೆ. ಆದರೆ ಅವರು ಹೇಳುವುದು ಏನೆಂದರೆ, 10 ವರ್ಷ ಆದಂಥವರನ್ನು Director of Prosecution ಮತ್ತು Joint Director of Prosecution ಮಾಡಿ ಎಂದು. ಈ ರೀತಿ ಮಾಡಿದರೆ ನಮ್ಮಲ್ಲಿ ಇಷ್ಟು ವರ್ಷ ಸರ್ವಿಸ್ ಮಾಡಿದವರಿಗೆ ಆ ಅವಕಾಶಗಳು ತಪ್ಪಿ ಬೇರೆ ಇನ್ಯಾರಿಗೋ Director of Prosecution ಆಗುವಂಥ ಒಂದು ಸಂದರ್ಭ ಬರುತ್ತದೆ. ಇದರಿಂದಾಗಿ ಗೊಂದಲಗಳು ಹೆಚ್ಚಾಗುತ್ತವೆ. ಮತ್ತು ಅನುಭವದ ದೃಷ್ಟಿಯಿಂದಲೂ ಈ ರೀತಿ promotion ಗಳಾಗಿ ಆ ಸ್ಥಾನಕ್ಕೆ ಹೋದರೆ ಹೆಚ್ಚು ಅನುಭವವನ್ನು ಹೊಂದಿರುವವರು ಆ ಸ್ಥಾನಕ್ಕೆ ಆ ಜವಾಬ್ದಾರಿಗೆ ಬರುತ್ತಾರೆ. ಹೀಗಾಗಿ ಆ ಬದಲಾವಣೆಗಳನ್ನು ನಮ್ಮಲ್ಲಿ ಅಗತ್ಯವಿಲ್ಲ. ನಾವು ಈಗಾಗಲೇ ಏನು Procedure ಮಾಡಿಕೊಂಡಿರುವುದು

ಇದೆ, appointment ಮಾಡಿಕೊಂಡು Promotion ಕೊಟ್ಟುಕೊಂಡು ನಮ್ಮೆಲ್ಲಾ ಚಟುವಟಿಕೆ ನಡೆಸುತ್ತಿರುವುದು ಇದೆ, ಅದಕ್ಕೆ as it is ನಾವು continue ಮಾಡುವುದಕ್ಕೆ ಈ ಒಂದು ಅಮೆಂಡ್‌ಮೆಂಟ್‌ನ್ನು ತರುತ್ತಿದ್ದೇವೆ ಅಷ್ಟೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಮತಕ್ಕೆ ಹಾಕುತ್ತೇನೆ.

ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) (ಮಾನ್ಯ ಗೃಹಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : "2009ನೆ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ : 2 ಇತ್ಯಾದಿ

ಅಧ್ಯಕ್ಷರು : "ಖಂಡ 2ನ್ನು ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ನೇ ಖಂಡವು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ: 1 ಇತ್ಯಾದಿ:

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಮಯಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ರ ಸಾಲಿನ ದಂಡ ಪ್ರಕ್ರಿಯೆ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2009ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(4 - 40 P.M)

ಅಧ್ಯಕ್ಷರು : ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಮಾನ್ಯ ಮಂತ್ರಿಗಳು ಪರ್ಯಾಲೋಚಿಸುವುದು.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2009ನೇ ಸಾಲಿನ ಕರ್ನಾಟಕ ಸಂಸ್ಕೃತ ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ಏನು? ಈಗ ಎರಡು ಬಿಲ್ಲುಗಳು ಪಾಸಾಗಿದೆ. ಇದನ್ನು ನಾಳೆ ತೆಗೆದುಕೊಳ್ಳಿ. ಈ ಬಿಲ್ಲನ್ನು ನಾಳೆ ಪಾಸು ಮಾಡಿಕೊಡೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಬಜೆಟ್ ಸೆಷನ್ ಕರೆದು ಮೊನ್ನೆ ವಿರೋಧ ಪಕ್ಷದ ನಾಯಕರು ಮಾತನಾಡುವವರು ಇದ್ದಾರೆ. ಇದರ ಬಗ್ಗೆ ಬೇರೆ ಯಾವ ಸದಸ್ಯರುಗಳು ಮಾತನಾಡಿರುವುದಿಲ್ಲ. ಬಜೆಟ್ ಮೇಲೆ ಚರ್ಚೆ ನಡೆಯುವುದು ಯಾವಾಗ? ಇದರ ಮೇಲೆ ಮಾತನಾಡುವ ಬಗ್ಗೆ ತಾವು ಕಾಲವನ್ನು ನಿಗಧಿ ಮಾಡಿದ್ದೀರಿ.

ಅಧ್ಯಕ್ಷರು : ಆಯಿತು. ಈ ಬಿಲ್‌ನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿನ ಮೂರು ಬಿಲ್‌ಗಳು ಪಾಸಾಗಿದೆ. ನಿನ್ನೆ ಎರಡು ಬಿಲ್ ಬಗ್ಗೆ ಚರ್ಚೆ ಮಾಡಿ ಆಗಿದೆ. ಈ ಬಿಲ್ ಪಾಸು ಮಾಡಿಕೊಡಿ.

ಅಧ್ಯಕ್ಷರು : ಆಯಿತು, ಈ ಬಿಲ್‌ನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಡಾ: ಮಹದೇವಪ್ಪನವರೆ, ಹಾಗೂ ಜಯಚಂದ್ರರವರೆ ಈಗ ಬಿಲ್‌ನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಅನಗತ್ಯವಾಗಿ ಏಕೆ ಈ ರೀತಿ ಮಾಡುತ್ತೀರಿ.?

ಶ್ರೀ ಟಿ.ಬಿ. ಜಯಚಂದ್ರ : ನಾಳೆ ಇದನ್ನು ಚರ್ಚೆಗೆ ತೆಗೆದು ಕೊಳ್ಳೋಣ. ಏಕೆ ಇಷ್ಟೊಂದು ಅರ್ಜೆಂಟ್.?

ಅಧ್ಯಕ್ಷರು : ಆಯಿತು. ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳು.. ಮಾನ್ಯ ಹೆಚ್.ಕೆ.ಕುಮಾರಸ್ವಾಮಿಯವರು ತಾವು ಮಾತನಾಡಿ.

8. ವಿತ್ತೀಯ ಕಾರ್ಯಕಲಾಪಗಳು :

ವಿಷಯ : 2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು) : ಮಾನ್ಯ ಅಧ್ಯಕ್ಷರೆ, ಈ ವರ್ಷದ ವಿತ್ತೀಯ ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಬಹುಶಃ ಇತ್ತೀಚಿನ ದಿನಗಳಲ್ಲಿ ಅಧಿವೇಶನವೆಂದರೆ, ಒಂದು ರೀತಿಯ ಉದಾಸೀನಕ್ಕೆ ಒಳಗಾಗಿದೆ ಎಂದು ನಾನು ಭಾವಿಸಿದ್ದೇನೆ. ರಾಜ್ಯಪಾಲರ ವಂದನಾ ನಿರ್ಣಯ, ಬಜೆಟ್ ಮೇಲಿನ ಚರ್ಚೆ, ಕಾನೂನುಗಳ ರಚನೆ ಹೀಗೆ ಅನೇಕ ವಿಶಿಷ್ಟ ಸಂದರ್ಭ ಗಳಲ್ಲಿ ನಾವು ಅಧಿವೇಶನವನ್ನು ಕರೆಯುತ್ತಿದ್ದೇವೆ. ಆದರೆ ಈಗ ರಾಜ್ಯಪಾಲರ ವಂದನಾ ನಿರ್ಣಯ ಇರಬಹುದು, ಬಜೆಟ್ ಮೇಲಿನ ಚರ್ಚೆಯಿರಬಹುದು, ಬೇಡಿಕೆಯ ಮೇಲಿನ ಚರ್ಚೆ, ಇರಬಹುದು, ಕಾನೂನುಗಳ ರಚನೆಯ ವಿವೇಚನೆಯ ಬಗ್ಗೆ ಚರ್ಚೆ ಇರಬಹುದು, ಕೇವಲ ಕೆಲವೇ ದಿನಗಳು, ಕೆಲವೇ ಗಂಟೆಗಳಿಗೆ ಸೀಮಿತವಾಗಿರುವಂತಹದ್ದು ತುಂಬಾ ದುರದೃಷ್ಟಕರ. ಹಿಂದೆ ಒಂದು ರಾಜ್ಯಪಾಲರ ನಿರ್ಣಯ ಎಂದರೆ 10 ದಿನಗಳ ಕಾಲ 2 ವಾರಗಳ